# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 383 |
| 2 | ಸದಸ್ಯರ ಹೆಸರು | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ವಿಷಯ | ರೈತರ ಜಮೀನು ಅಳತೆ ಮಾಡಿದ ಪೋಡಿ ಶುಲ್ಕ ಸರ್ಕಾರದ ಖಜಾನೆ ಸೇರದೆ ಇರುವ ಬಗ್ಗೆ |
| 4 | ಉತ್ತರಿಸುವ ದಿನಾಂಕ | 12.12.2018 |
| 5 | ಉತ್ತರಿಸುವ ಸಚಿವರು | ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರೈತರ ಜಮೀನುಗಳನ್ನು ಅಳತೆ ಮಾಡಿ, ತತ್ಕಾಲ್ ಪೋಡಿ ಮಾಡಿಕೊಡಲು ಸರ್ಕಾರವು ಶುಲ್ಕ ವಿಧಿಸಿ ವಸೂಲು ಮಾಡಿದ ಕೋಟ್ಯಾಂತರ ರೂಪಾಯಿ ಹಣ ಸರ್ಕಾರದ ಖಜಾನೆ ಸೇರದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಆದೇಶ ಸಂಖ್ಯೆ ಕಂಇ 142 ಭೂದಾಸ 2008, ದಿನಾಂಕ 12/08/2008 ರನ್ವಯ ಮೋಜಣಿ ಯೋಜನೆಯಡಿಯಲ್ಲಿ ಅಳತೆಗಾಗಿ ಸ್ವೀಕೃತವಾಗುವ ಅರ್ಜಿಗಳ ಹಣವನ್ನು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಇವರ ಪದನಾಮದ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡು ಸದರಿ ಹಣದಿಂದ ಪರವಾನಗಿ ಭೂಮಾಪಕರುಗಳಿಗೆ ಸೇವಾ ಶುಲ್ಕವನ್ನು ನೀಡಿ ನಿರ್ವಹಣೆ ಮಾಡಲು ಆದೇಶವಾಗಿರುತ್ತದೆ.<br>ಮೋಜಣಿ ಯೋಜನೆಯಡಿಯಲ್ಲಿ ಅಳತೆಗಾಗಿ ಸ್ವೀಕೃತವಾಗುವ ಅರ್ಜಿಗಳ ಹಣ ಸರ್ಕಾರದ ಖಜಾನೆಗೆ ಜಮೆ ಆಗುವುದಿಲ್ಲ.<br>ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಇವರ ಸುತ್ತೋಲೆ ಸಂಖ್ಯೆ ಪಿಎಂಯು ಮೋಜಣಿ 77/2012-13 ದಿನಾಂಕ 26/12/12 ರನ್ವಯ ಮೋಜಣಿ ಯೋಜನೆಯಡಿಯಲ್ಲಿ ಅಳತೆಗಾಗಿ ನಕ್ಷೆ ಕೋರಿ ನಾಡಕಚೇರಿಗಳಲ್ಲಿ ಸ್ವೀಕೃತವಾಗುವ ಅರ್ಜಿಗಳ ಶುಲ್ಕವನ್ನು ನಾಡಕಚೇರಿಯ ಉಪ ತಹಶೀಲ್ದಾರ್‌ರವರು ಪ್ರತಿದಿನ ಸಂಗ್ರಹವಾದ ಶುಲ್ಕವನ್ನು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಇವರ ಪದನಾಮದ ಬ್ಯಾಂಕ್ ಖಾತೆಗೆ ಜಮಾ ಮಾಡಲು ಸೂಚನೆಗಳನ್ನು ನೀಡಲಾಗಿರುತ್ತದೆ.<br>ಅಳತೆಗಾಗಿ ಸ್ವೀಕರಿಸಲಾಗಿರುವ ಅರ್ಜಿ ಹಣ ಹಾಗೂ ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಇವರ ಪದನಾಮದ ಬ್ಯಾಂಕ್ ಖಾತೆಗೆ ಜಮಾ ಮಾಡಲಾದ ಹಣವನ್ನು ಹೊಂದಾಣಿಕೆ ಮಾಡಲು ಕಾಲಕಾಲಕ್ಕೆ ಎಲ್ಲಾ ಜಿಲ್ಲೆಗಳ ಭೂ ದಾಖಲೆಗಳ ಉಪ ನಿರ್ದೇಶಕರವರುಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. |
| ಆ) | ಹಾಗಿದ್ದಲ್ಲಿ, ರೈತರಿಂದ ವಸೂಲು ಮಾಡಿದ ಕೋಟ್ಯಾಂತರ ರೂಪಾಯಿ ಹಣ ಎಲ್ಲಿ ಜಮೆಯಾಗಿದೆ; ಇದನ್ನು ಪತ್ತೆ ಮಾಡಿ ವಸೂಲು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮ ಗಳೇನು; | ಸರ್ಕಾರದ ಆದೇಶ ಸಂಖ್ಯೆ.ಕಂಇ 142 ಭೂದಾಸ 2008, ದಿನಾಂಕ 12/08/2008 ರನ್ವಯ ಮೋಜಣಿ ಯೋಜನೆಯಡಿಯಲ್ಲಿ ಅಳತೆಗಾಗಿ ಸ್ವೀಕೃತವಾಗುವ ಅರ್ಜಿಗಳ ಹಣವನ್ನು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಇವರ ಪದನಾಮದ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡು ಸದರಿ ಹಣದಿಂದ ಪರವಾನಗಿ ಭೂಮಾಪಕರುಗಳಿಗೆ ಸೇವಾ ಶುಲ್ಕವನ್ನು ನೀಡಿ ನಿರ್ವಹಣೆ ಮಾಡಲು ಆದೇಶವಾಗಿರುತ್ತದೆ<br>ಮೋಜಣಿ ಯೋಜನೆಯಡಿಯಲ್ಲಿ ಸ್ವೀಕೃತವಾದ ಹಣವನ್ನು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಇವರ ಪದನಾಮದ ಖಾತೆಗೆ ಜಮಾ ಮಾಡಲಾಗಿರುತ್ತದೆ. ಆದರೆ ಸ್ವೀಕೃತವಾದ ಹಣ ಹಾಗೂ ಜಮೆಯಾದ ಹಣದ ಹೊಂದಾಣಿಕೆ ಕಾರ್ಯ ಪ್ರಗತಿಯಲ್ಲಿದ್ದು ಪೂರ್ಣಗೊಂಡಿಲ್ಲ. ಈ ಬಗ್ಗೆ ಎಲ್ಲಾ ಜಿಲ್ಲೆಗಳ ಭೂದಾಖಲೆಗಳ ಉಪ ನಿರ್ದೇಶಕರವರುಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. |

<table>
<tr>
<td>ಇ)</td>
<td>2014-15, 2015-16, 2016-17 ಹಾಗೂ 2017-18ನೇ ಸಾಲಿನಲ್ಲಿ ಎಷ್ಟು ಎಕರೆ ಜಮೀನುಗಳು ಪೋಡಿಯಾಗಿವೆ; ಎಕರೆಗೆ ಎಷ್ಟು ನಿಗಧಿ ಮಾಡಲಾಗಿದೆ; ಅಂದಾಜು ಒಟ್ಟು ಎಷ್ಟು ಮೊತ್ತದ ಹಣ ವಸೂಲಾಗಿದೆ; (ವಿವರ ನೀಡುವುದು)</td>
<td>2014-15, 2015-16, 2016-17, 2017-18 ನೇ ಸಾಲಿನಲ್ಲಿ 4,19,034 ಎಕರೆ ಜಮೀನುಗಳು ಪೋಡಿಯಾಗಿವೆ.<br>ಸರ್ಕಾರದ ಆದೇಶ ಸಂಖ್ಯೆ:ಕಂಇ 10 ಭೂದಾಸ 2014, ದಿನಾಂಕ:17-02-2014 ರಂತೆ ರೈತರಿಂದ ಎಕರೆಗೆ ವಸೂಲು ಮಾಡಲು ನಿಗದಿಪಡಿಸಿರುವ ಶುಲ್ಕದ ಮೊತ್ತ ಈ ಕೆಳಗಿನಂತಿರುತ್ತದೆ.
<table>
<tr><th>ವಹಿವಾಟಿನ ತರಹೆ</th><th>ಜಮೀನು ಇರುವ ಪ್ರದೇಶ</th><th>ಪ್ರತಿ 2 ಎಕರೆಗೆ</th><th>ಹೆಚ್ಚುವರಿಯಾದ ಪ್ರತಿ ಭಾಗಶ: ಎಕರೆಗೆ</th></tr>
<tr><td>11ಇ,ಅಲಿನೇಷನ್, ತತ್ಕಾಲ್ ಪೋಡಿ,</td><td>ನಗರ ಪ್ರದೇಶ (ಪ್ರತಿ 2 ಎಕರೆಗೆ)<br><br>ಗ್ರಾಮೀಣ ಪ್ರದೇಶ (ಪ್ರತಿ2 ಎಕರೆಗೆ)</td><td>ರೂ.2000/-<br><br>ರೂ. 1200/-</td><td>ರೂ. 200/-<br><br>ರೂ. 100/-</td></tr>
<tr><td>ವಿಭಾಗ</td><td>ನಗರ ಪ್ರದೇಶ</td><td>ಒಂದು ಸರ್ವೆ ನಂಬರಿಗೆ ರೂ.1200/-</td><td>ಹೆಚ್ಚುವರಿ ಸರ್ವೆ ನಂಬರಿಗೆ ರೂ. 200/-</td></tr>
<tr><td></td><td>ಗ್ರಾಮೀಣ ಪ್ರದೇಶ</td><td>ಒಂದು ಸರ್ವೆ ನಂಬರಿಗೆ ರೂ.1000/-</td><td>ಹೆಚ್ಚುವರಿ ಸರ್ವೆ ನಂಬರಿಗೆ ರೂ. 100/- ಗರಿಷ್ಠ ಮೊತ್ತ ರೂ.2500/-</td></tr>
<tr><td colspan="4">ಒಟ್ಟು ರೂ. 1,79,91,48,223/- ವಸೂಲಾಗಿದೆ. ವಿವರವನ್ನು ಅನುಬಂಧದಲ್ಲಿ ನೀಡಿದೆ.</td></tr>
</table>
</td>
</tr>
<tr>
<td>ಈ)</td>
<td>ಸದರಿ ಕೋಟ್ಯಾಂತರ ರೂಪಾಯಿ ಹಣ ಖಜಾನೆಗೆ ಸೇರದಿರಲು ಕಾರಣ ರಾದ ಅಧಿಕಾರಿಗಳ ವಿರುದ್ಧ ಯಾವ ಶಿಸ್ತು ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)</td>
<td>ಮೋಜಣಿ ಯೋಜನೆಯಡಿಯಲ್ಲಿ ಸ್ವೀಕೃತವಾಗುವ ಅರ್ಜಿಗಳ ಹಣ ಮತ್ತು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಇವರ ಪದನಾಮದ ಖಾತೆಗೆ ಜಮೆಯಾಗಿರುವ ಹಣದ ಹೊಂದಾಣಿಕೆಯ ನಂತರ ಯಾವ ಅಧಿಕಾರಿಗಳಿಂದ ಹಣ ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗ್ಗಳ ಇಲಾಖೆ ಇವರ ಪದನಾಮದ ಖಾತೆಗೆ ಜಮೆ ಆಗದಿರುವುದು ತಿಳಿದುಬಂದಿರುತ್ತದೆ.<br>ಭೂದಾಖಲೆಗಳ ಉಪ ನಿರ್ದೇಶಕರವರುಗಳಿಂದ ಹೊಂದಾಣಿಕೆ ಕಾರ್ಯ ಪೂರ್ಣಗೊಳಿಸಿರುವ ಜಿಲ್ಲೆಗಳಲ್ಲಿ ಈಗಾಗಲೇ ಹೊಂದಾಣಿಕೆ ಲೋಪ ಮಾಡಿರುವ ಅಧಿಕಾರಿಗಳ ವಿರುದ್ಧ ಕಾರಣ ಕೇಳಿ ನೋಟೀಸುಗಳನ್ನು ನೀಡಲಾಗಿರುತ್ತದೆ.<br>ಮೋಜಣಿ ಯೋಜನೆಯಡಿಯಲ್ಲಿ ಸ್ವೀಕರಿಸಲಾಗಿರುವ ಅರ್ಜಿಗಳ ಹಣವು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಇವರ ಪದನಾಮದ ಖಾತೆಗೆ ಜಮಾ ಮಾಡಲಾದ ಹಣವನ್ನು ಹೊಂದಾಣಿಕೆ ಮಾಡಲು ಕಾಲಕಾಲಕ್ಕೆ ಎಲ್ಲಾ ಜಿಲ್ಲೆಯ ಭೂದಾಖಲೆಗಳ ಉಪ ನಿರ್ದೇಶಕರವರುಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ ಹಾಗೂ ಹೊಂದಾಣಿಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.</td>
</tr>
<tr>
<td>ಉ)</td>
<td>ಪೋಡಿಯಾಗದೇ ಇರುವ ರೈತರಿಗೆ ಅವರು ಕಟ್ಟಿದ ಶುಲ್ಕವನ್ನು ಹಿಂದಿರುಗಿಸಲು ಕೈಗೊಂಡಿರುವ ಕಾರಣಗಳೇನು?(ವಿವರ ನೀಡುವುದು)</td>
<td>ರೈತರಿಂದ ಪೋಡಿಗಾಗಿ ಸ್ವೀಕರಿಸಲಾಗುವ ಅರ್ಜಿಗಳ ಪೈಕಿ ಭೂಮಾಪನ ಇಲಾಖೆಯಿಂದ ಪೋಡಿ ಕ್ರಮ ಜರುಗಿಸುತ್ತಿರುವ ಕಾರಣ ಪೋಡಿಯಾಗದೇ ಇರುವ ರೈತರಿಗೆ ಅವರು ಕಟ್ಟಿದ ಶುಲ್ಕವನ್ನು ಹಿಂದಿರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.</td>
</tr>
</table>

ಕಂಇ 222 ಭೂದಾಸ 2018

**(ಆರ್.ವಿ.ದೇಶಪಾಂಡೆ)**
ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು